| District :Mysore | State : Karnataka |
|---|---|

## Department of Veterinary

# ಇಲಾಖೆಯ ಯೋಜನಾ ಕಾರ್ಯಕ್ರಮಗಳಿಗೆ ಸಂಬಂಧಿಸಿದ ಟಿಪ್ಪಣಿ

## (ಅ) ಜಿಲ್ಲಾ ಪಂಚಾಯತ್ ಕಾರ್ಯಕ್ರಮಗಳು:

### 1. ಜಾನುವಾರು ಆಸ್ಪತ್ರೆಯಲ್ಲಿ ಪಾಲಿಕ್ಲಿನಿಕ್ – 2403–00–101–0–17

ಜಿಲ್ಲೆಯ ಮೈಸೂರು ನಗರ, ನಂಜನಗೂಡು ಮತ್ತು ಕೆ.ಆರ್.ನಗರ ಪಟ್ಟಣಗಳಲ್ಲಿ 1994–95ನೇ ಸಾಲಿನಲ್ಲಿ ಪಾಲಿಕ್ಲಿನಿಕ್ ಸಂಸ್ಥೆಗಳನ್ನು ಸ್ಥಾಪಿಸಲಾಗಿದೆ. ಈ ಸಂಸ್ಥೆಗಳಿಗೆ ಸ್ವಂತ ಕಟ್ಟಡವನ್ನು ನಿರ್ಮಾಣ ಮಾಡಿದ್ದು, ಇತರೆ ಯಾವುದೇ ಮೂಲಭೂತ ಸೌಕರ್ಯಗಳನ್ನು ಒದಗಿಸಿರುವುದಿಲ್ಲ ಮತ್ತು ಹುದ್ದೆಯನ್ನು ಸಹ ಮಂಜೂರು ಮಾಡಿರುವುದಿಲ್ಲ. ಈ ಯೋಜನೆಯಲ್ಲಿ ಬಿಡುಗಡೆಯಾಗುವ ಅನುದಾನದಿಂದ ಈ ಸಂಸ್ಥೆಗಳಿಗೆ ಬೇಕಾದ ಔಷಧಿಗಳು, ಕ್ಷ–ಕಿರಣ ಯಂತ್ರಗಳು, ಶಸ್ತ್ರಚಿಕಿತ್ಸಾ ಉಪಕರಣಗಳು, ಸಲಕರಣೆಗಳು, ಸಣ್ಣ ಮತ್ತು ದೊಡ್ಡ ಪ್ರಾಣಿಗಳನ್ನು ಪರೀಕ್ಷೆ ಮಾಡಲು ಬೇಕಾದ ಉಪಕರಣಗಳು ಹಾಗೂ ಪೀಠೋಪಕರಣಗಳನ್ನು ದರಗುತ್ತಿಗೆ ಮತ್ತು ಸರ್ಕಾರಿ ಸ್ವಾಮ್ಯದ ಸಂಸ್ಥೆಗಳಿಂದ ಖರೀದಿಸುವುದು ಮತ್ತು ಇತರೆ ಮೂಲಭೂತ ಸೌಕರ್ಯಗಳನ್ನು ಒದಗಿಸಲು ಅನುದಾನವನ್ನು ಉಪಯೋಗಿಸಲಾಗುವುದು.

| ನಿಗದಿಯಾದ ಅನುದಾನ | ಬಿಡುಗಡೆ | ವೆಚ್ಚ |
|---|---|---|
| ರೂ.5.00 ಲಕ್ಷ | ರೂ.5.00 ಲಕ್ಷ | ರೂ.3.77 ಲಕ್ಷ |

### 2. ಕಟ್ಟಡಗಳು 2403–00–101–0–61

ಜಿಲ್ಲೆಯಲ್ಲಿ ಸ್ವಂತ ಕಟ್ಟಡ ಇಲ್ಲದಿರುವ ಸಂಸ್ಥೆಗಳನ್ನು ಗುರುತಿಸಿ, ಸದರಿ ಸಂಸ್ಥೆಗಳಿಗೆ ದಾನಿಗಳಿಂದ ಅಥವಾ ಸಂಘ ಸಂಸ್ಥೆಗಳಿಂದ ನಿವೇಶನವನ್ನು ಪಡೆದು ಅವುಗಳಿಗೆ ಕಟ್ಟಡವನ್ನು ನಿರ್ಮಾಣ ಮಾಡಲಾಗುವುದು. ಕಾಮಗಾರಿಯನ್ನು ಜಿಲ್ಲಾ ಪಂಚಾಯತ್ ಇಂಜಿನಿಯರಿಂಗ್ ವಿಭಾಗದಿಂದ ಅಂದಾಜು ಪಟ್ಟಿ ತಯಾರಿಸಿ ಅನುಮೋದನೆ ಪಡೆದು ಹಂತ ಹಂತವಾಗಿ ಈ ಯೋಜನೆಯಡಿ ಬಿಡುಗಡೆಯಾಗುವ ಅನುದಾನದಿಂದ ಕೈಗೆತ್ತಿಕೊಳ್ಳಲಾಗುವುದು.

| ನಿಗದಿಯಾದ ಅನುದಾನ | ಬಿಡುಗಡೆ | ವೆಚ್ಚ |
|---|---|---|
| ರೂ.5.00 ಲಕ್ಷ | ರೂ.2.74 ಲಕ್ಷ | ರೂ.2.74 ಲಕ್ಷ |

### 3. ಔಷಧಿಗಳು, ರಾಸಾಯನಿಕಗಳು ಮತ್ತು ಸಾಮಗ್ರಿಗಳ ಸರಬರಾಜು 2403–00–101–00–73

2003ರ ಜಾನುವಾರು ಗಣತಿ ಅನ್ವಯ ಜಿಲ್ಲೆಯಲ್ಲಿ ಒಟ್ಟು 10.53 ಲಕ್ಷ ಜಾನುವಾರುಗಳಿರುತ್ತವೆ. ಪ್ರತಿ ವರ್ಷ ಜಿಲ್ಲೆಯ 177 ಪಶುವೈದ್ಯ ಸಂಸ್ಥೆಗಳಲ್ಲಿ ಅಂದಾಜು 5–6 ಲಕ್ಷ ಜಾನುವಾರುಗಳು ಚಿಕಿತ್ಸೆಯನ್ನು ಪಡೆಯುತ್ತಿವೆ ಮತ್ತು 1 ಲಕ್ಷ ಜಾನುವಾರುಗಳಿಗೆ ಕೃತಕ ಗರ್ಭಧಾರಣೆ ಸೌಲಭ್ಯವನ್ನು ಒದಗಿಸಲಾಗುತ್ತಿದೆ. ಈ ಜಾನುವಾರುಗಳ ಚಿಕಿತ್ಸೆ ಮತ್ತು ಕೃತಕ ಗರ್ಭಧಾರಣಾ

ಕಾರ್ಯಕ್ರಮಕ್ಕೆ ಬೇಕಾದ ಔಷಧಿಗಳು, ರಾಸಾಯನಿಕಗಳು, ಸಲಕರಣೆಗಳು, ದ್ರವಸಾರಜನಕ ಕ್ರಯೋ ಕ್ಯಾನ್‌ಗಳು, ಶೀಥ್ಸ್‌ಗಳು ಹಾಗೂ ಇನ್ನಿತರ ಉಪಕರಣಗಳನ್ನು ದರಗುತ್ತಿಗೆ ಮತ್ತು ಸರ್ಕಾರಿ ಸ್ವಾಮ್ಯದ ಸಂಸ್ಥೆಗಳಿಂದ ಖರೀದಿಸಲು ಮತ್ತು ದ್ರವಸಾರಜನಕದ ಸಾಗಾಟ ವೆಚ್ಚಕ್ಕಾಗಿ ಈ ಯೋಜನೆಯಡಿ ಬಿಡುಗಡೆಯಾಗುವ ಅನುದಾನವನ್ನು ಉಪಯೋಗಿಸಲಾಗುವುದು.

| ನಿಗದಿಯಾದ ಅನುದಾನ | ಬಿಡುಗಡೆ | ವೆಚ್ಚ |
|---|---|---|
| ರೂ.13.00 ಲಕ್ಷ | ರೂ.12.98 ಲಕ್ಷ | ರೂ.9..06 ಲಕ್ಷ |

**4. ಗಿರಿರಾಜ ಕೋಳಿ ಮರಿಗಳ ಸಾಕಾಣಿಕೆ 2403–00–800—0–53**

ಜಿಲ್ಲೆಯ ತಿ.ನರಸೀಪುರ ತಾಲ್ಲೂಕಿನಲ್ಲಿರುವ ಕೋಳಿ ವಿಸ್ತರಣಾ ಕೇಂದ್ರದಲ್ಲಿ ಗಿರಿರಾಜ ಕೋಳಿ ಮರಿಗಳನ್ನು ಸಾಕಾಣಿಕೆ ಮಾಡಿ ಆಸಕ್ತ ರೈತರಿಗೆ ಮಹಿಳೆಯರಿಗೆ ಮತ್ತು ಎಸ್.ಜಿ.ಎಸ್.ವೈ.ಫಲಾನುಭವಿಗಳಿಗೆ ನಿಗದಿಪಡಿಸಿದ ದರದಲ್ಲಿ ಮಾರಾಟ ಮಾಡಲಾಗುವುದು. ಈ ಕೋಳಿ ಮರಿಗಳನ್ನು ಮಂಡ್ಯ ಜಿಲ್ಲೆ ಮಳವಳ್ಳಿಯಲ್ಲಿರುವ ಪ್ರಾದೇಶಿಕ ಕೋಳಿ ಸಂವರ್ಧನಾ ಕೇಂದ್ರದಿಂದ ನಿಗದಿತ ದರದಲ್ಲಿ ಖರೀದಿಸಲಾಗುವುದು. ಈ ಕೋಳಿ ಮರಿಗಳಿಗೆ ಬೇಕಾದ ಔಷಧಿ, ಆಹಾರ ಇತರ ನಿರ್ವಹಣಾ ಸಲಕರಣೆಗಳನ್ನು ದರಗುತ್ತಿಗೆ ಮತ್ತು ಸರ್ಕಾರಿ ಸ್ವಾಮ್ಯದ ಸಂಸ್ಥೆಗಳಿಂದ ಖರೀದಿಸಲು ಮತ್ತು ಕೋಳಿ ವಿಸ್ತರಣಾ ಕೇಂದ್ರಕ್ಕೆ ಬೇಕಾದ ಮೂಲಭೂತ ಸೌಕರ್ಯಗಳನ್ನು ಒದಗಿಸಲು ಈ ಯೋಜನೆಯಡಿ ಬಿಡುಗಡೆಯಾದ ಅನುದಾನವನ್ನು ಉಪಯೋಗಿಸಲಾಗುವುದು.

| ನಿಗದಿಯಾದ ಅನುದಾನ | ಬಿಡುಗಡೆ | ವೆಚ್ಚ |
|---|---|---|
| ರೂ.1.25 ಲಕ್ಷ | ರೂ.1.25 ಲಕ್ಷ | ರೂ.0.61 ಲಕ್ಷ |

**5. ವಿಸ್ತರಣಾ ಘಟಕಗಳನ್ನು ಬಲಪಡಿಸುವಿಕೆ 2403–00–800–0–55**

ಜಿಲ್ಲೆಯ ಏಳು ತಾಲ್ಲೂಕುಗಳಲ್ಲಿರುವ ವಿಸ್ತರಣಾ ಘಟಕಗಳನ್ನು ಬಲಪಡಿಸಲು, ಇಲಾಖೆಯ ಕಾರ್ಯಕ್ರಮಗಳ ಕುರಿತು, ಜಾನುವಾರುಗಳಿಗೆ ತಗಲುವ ವಿವಿಧ ರೋಗಗಳ ಕುರಿತು ರೈತರಿಗೆ ಮಾಹಿತಿಯನ್ನು ನೀಡುವುದು, ತರಬೇತಿ ಕಾರ್ಯಾಕ್ರಮಗಳನ್ನು ಏರ್ಪಡಿಸುವುದು ಈ ಯೋಜನೆಯ ಉದ್ದೇಶವಾಗಿದೆ. ತರಬೇತಿ ಕಾರ್ಯಕ್ರಮಗಳಿಗೆ ಬೇಕಾದ ದೂರದರ್ಶನ, ಡಿ.ವಿ.ಡಿ.ಪ್ಲೇಯರ್ ಇನ್ನಿತರ ಎಲೆಕ್ಟ್ರಾನಿಕ್ ಉಪಕರಣಗಳ ಖರೀದಿ ಮತ್ತು ಕಾರ್ಯಕ್ರಮಗಳ ವೆಚ್ಚಕ್ಕಾಗಿ ಈ ಯೋಜನೆಯಡಿ ಬಿಡುಗಡೆಯಾದ ಅನುದಾನಾವನ್ನು ಉಪಯೋಗಿಸಲಾಗುವುದು.

| ನಿಗದಿಯಾದ ಅನುದಾನ | ಬಿಡುಗಡೆ | ವೆಚ್ಚ |
|---|---|---|
| ರೂ.1.00 ಲಕ್ಷ | ರೂ.1.00 ಲಕ್ಷ | ರೂ.0.08 ಲಕ್ಷ |

## (ಆ) ತಾಲ್ಲೂಕು ಪಂಚಾಯತ್ ಕಾರ್ಯಕ್ರಮಗಳು:

**1. ಗ್ರಾಮೀಣ ಪಶುವೈದ್ಯ ಶಾಲೆಗಳನ್ನು ತೆರೆಯುವುದು ಮತ್ತು ಮೇಲ್ದರ್ಜೆಗೇರಿಸುವುದು 2403–00–101–0–71**

ಈ ಯೋಜನೆಯಡಿ ಮಂಜೂರಾಗಿರುವ ಪಶುವೈದ್ಯ ಸಂಸ್ಥೆಗಳಲ್ಲಿನ ಹುದ್ದೆಗಳಿಗೆ ಬೇಕಾದ ವೇತನ ಮತ್ತು ವೇತನೇತರ ಸೌಲಭ್ಯಗಳನ್ನು ಒದಗಿಸುವುದು, ಕಛೇರಿ ವೆಚ್ಚ, ದೂರವಾಣಿ ವೆಚ್ಚ, ಸಂಚಾರಿ ಪಶು ಚಿಕಿತ್ಸಾಲಯದ ವಾಹನಗಳಿಗೆ ಬೇಕಾದ ಇಂಧನ ಖರೀದಿ, ನಿರ್ವಹಣೆ ಮತ್ತು ದುರಸ್ಥಿ ವೆಚ್ಚ ಹಾಗೂ ವಿಶೇಷ ಜಾನುವಾರು ತಳಿ ಅಭಿವೃದ್ಧಿ ಯೋಜನೆಯಡಿ ಸಣ್ಣ ಮತ್ತು ಆತಿಸಣ್ಣ ರೈತರು ಕೃಷಿ ಕಾರ್ಮಿಕರನ್ನು ಗುರುತಿಸಿ ಅವರ ಬಳಿ ಇರುವ ಮಿಶ್ರತಳಿ ಕರುಗಳನ್ನು ಸಾಕಾಣಿಕೆ ಮಾಡಲು ಆಹಾರ ಖರೀದಿಗೆ ಸಹಾಯ ಧನವನ್ನು ನೀಡಿ ಯೋಜನೆಯನ್ನು ಅನುಷ್ಟಾನಗೊಳಿಸಲು ಮತ್ತು ಪಶುವೈದ್ಯ ಸಂಸ್ಥೆಗಳಿಗೆ ಬೇಕಾದ ಔಷಧಿ, ರಾಸಾಯನಿಕಗಳ ಖರೀದಿಗೆ ಈ ಯೋಜನೆಯಡಿ ಬಿಡುಗಡೆಯಾದ ಅನುದಾನವನ್ನು ಉಪಯೋಗಿಸಲಾಗುವುದು.

| ನಿಗದಿಯಾದ ಅನುದಾನ | ಬಿಡುಗಡೆ | ವೆಚ್ಚ |
|---|---|---|
| ರೂ.100.00 ಲಕ್ಷ | ರೂ.77.94 ಲಕ್ಷ | ರೂ.77.50 ಲಕ್ಷ |

**2. ಬರಡು ರಾಸು ಚಿಕಿತ್ಸಾ ಶಿಬಿರಾಗಳನ್ನು ಏರ್ಪಡಿಸುವುದು 2403–00–102–2–79**

ಜಿಲ್ಲೆಯಲ್ಲಿ ಗ್ರಾಮೀಣ ಪ್ರದೇಶಗಳಲ್ಲಿ ಬರಡು ರಾಸು ಚಿಕಿತ್ಸಾ ಶಿಬಿರಗಳನ್ನು ಏರ್ಪಡಿಸಿ ಶಿಬಿರಕ್ಕೆ ಬರುವ ಜಾನುವಾರುಗಳಿಗೆ ಉಚಿತ ಆರೋಗ್ಯ ತಪಾಸಣೆ ಮತ್ತು ಚಿಕಿತ್ಸೆಯನ್ನು ಈ ಕಾರ್ಯಕ್ರಮದಡಿ ನೀಡಲಾಗುವುದು. ಈ ಶಿಬಿರಗಳಿಗೆ ಬೇಕಾದ ಔಷಧಿಗಳು, ರಾಸಾಯನಿಕಗಳು ಮತ್ತು ಸಾಮಗ್ರಿಗಳನ್ನು ದರಗುತ್ತಿಗೆ ಮತ್ತು ಸರ್ಕಾರಿ ಸ್ವಾಮ್ಯದ ಸಂಸ್ಥೆಗಳಿಂದ ಖರೀದಿಸಲು ಈ ಯೋಜನೆಯಡಿ ಬಿಡುಗಡೆಯಾಗುವ ಅನುದಾನವನ್ನು ಉಪಯೋಗಿಸಲಾಗುವುದು.

| ನಿಗದಿಯಾದ ಅನುದಾನ | ಬಿಡುಗಡೆ | ವೆಚ್ಚ |
|---|---|---|
| ರೂ.3.50 ಲಕ್ಷ | ರೂ.2.52 ಲಕ್ಷ | ರೂ.1.57 ಲಕ್ಷ |

**3. ಜಾನುವಾರು ರೋಗಗಳ ನಿಯಂತ್ರಣಕ್ಕೆ ನೆರವು 2403–00–101–0–21**

ಈ ಯೋಜನೆಯು ಕೇಂದ್ರ ಸರ್ಕಾರದ ನೆರವಿನ ಅನುದಾನದ ಕಾರ್ಯಕ್ರಮವಾಗಿದ್ದು, ಇದರಡಿ ಬರುವ ಅಧಿಕಾರಿ, ನೌಕರರ ವೇತನ ಮತ್ತು ವೇತನೇತರ ವೆಚ್ಚಗಳು ಹಾಗೂ ಜಾನುವಾರುಗಳಿಗೆ ತಗಲುವ ವಿವಿಧ ರೋಗಗಳ ವಿರುದ್ಧ ಮುಂಜಾಗ್ರತಾ ಕ್ರಮವಾಗಿ ಹಾಕುವ ಲಸಿಕಾ ಕಾರ್ಯಕ್ರಮಕ್ಕೆ ಬೇಕಾದ ಲಸಿಕೆಗಳನ್ನು ಈ ಯೋಜನೆಯಡಿ ಖರೀದಿಸಲಾಗುವುದು. ಅಧಿಕಾರಿ, ನೌಕರರ ವೇತನಕ್ಕೆ ರಾಜ್ಯದ ಪಾಲಿನ ಅನುಧಾನ ಶೇ.100 ಹಾಗೂ ಲಸಿಕೆಯ ಖರೀದಿಯ ಕಾರ್ಯಕ್ರಮಕ್ಕೆ ರಾಜ್ಯದ ಪಾಲು ಶೇ.25 ಮತ್ತು ಕೇಂದ್ರದ ಪಾಲು ಶೇ.75 ರಷ್ಟು ಅನುದಾನವನ್ನು ಬಿಡುಗಡೆ ಮಾಡಲಾಗುವುದು.

| ನಿಗದಿಯಾದ ಅನುದಾನ | ಬಿಡುಗಡೆ | ವೆಚ್ಚ |
|---|---|---|
| ರೂ.38.08 ಲಕ್ಷ | ರೂ.23.12 ಲಕ್ಷ | ರೂ.9.50 ಲಕ್ಷ |

**4. ವಿಶೇಷ ಘಟಕ ಯೋಜನೆ 2225–01–800–0–04**

ಈ ಲೆಕ್ಕಶೀರ್ಷಿಕೆಯು ಸಮಾಜ ಕಲ್ಯಾಣ ಇಲಾಖೆಗೆ ಸಂಬಂಧಿಸಿದ್ದು, ಕಾರ್ಯಕ್ರಮವನ್ನು ಈ ಇಲಾಖಾ ವತಿಯಿಂದ ಅನುಷ್ಠಾನಗೊಳಿಸಲಾಗುತ್ತಿದೆ. ಈ ಯೋಜನೆಯಡಿ ಪರಿಶಿಷ್ಟ ಜಾತಿಯ ಫಲಾಅನುಭವಿಗಳನ್ನು ಗ್ರಾಮಸಭೆಗಳಲ್ಲಿ ಆಯ್ಕೆ ಮಾಡಿ ತಾಲ್ಲೂಕು ಪಂಚಾಯತ್ ಅನುಮೋದನೆ ಪಡೆದು ಸದರಿ ಫಲಾನುಭವಿಗಳಿಗೆ ಒಂದು ಜೊತೆ ಮಿಶ್ರತಳಿ ಹಸುಗಳನ್ನು ಖರೀದಿಸಲು ಶೇ.60 ರಷ್ಟು ಸಹಾಯ ಧನವನ್ನು ನೀಡಲಾಗುವುದು. ಉಳಿದ ಶೇ..40 ರಷ್ಟು ಸಾಲದ ಮೊತ್ತವನ್ನು ರಾಷ್ಟ್ರೀಕೃತ ಬ್ಯಾಂಕ್‌ಗಳಿಂದ ಪಡೆಯಲಾಗುವುದು.

ಘಟಕ ಮಿಶ್ರತಳಿ ಹಸು ಒಂದು ಜೊತೆ

ಘಟಕದ ವೆಚ್ಚ ರೂ.24,000

ಸಹಾಯಧನ ರೂ..14,400

ಸಾಲ ರೂ.9,600

| ನಿಗದಿಯಾದ ಅನುದಾನ | ಬಿಡುಗಡೆ | ವೆಚ್ಚ |
|---|---|---|
| ರೂ.15.38 ಲಕ್ಷ | ರೂ.12.66 ಲಕ್ಷ | ರೂ.7.92 ಲಕ್ಷ |

5. **ಗಿರಿಜನ ಉಪಯೋಜನೆ 2225–02–796–0–04**

ಈ ಲೆಕ್ಕಶೀರ್ಷಿಕೆಯು ಸಮಗ್ರ ಗಿರಿಜನ ಅಭಿವೃದ್ಧಿ ಯೋಜನೆ ಇಲಾಖೆಗೆ ಸಂಬಂಧಿಸಿದ್ದು, ಕಾರ್ಯಕ್ರಮವನ್ನು ಈ ಇಲಾಖಾ ವತಿಯಿಂದ ಅನುಷ್ಠಾನಗೊಳಿಸಲಾಗುತ್ತಿದೆ. ಈ ಯೋಜನೆಯಡಿ ಪರಿಶಿಷ್ಟ ಪಂಗಡದ ಫಲಾನುಭವಿಗಳನ್ನು ಗ್ರಾಮಸಭೆಗಳಲ್ಲಿ ಆಯ್ಕೆ ಮಾಡಿ ತಾಲ್ಲೂಕು ಪಂಚಾಯತ್ ಅನುಮೋದನೆ ಪಡೆದು ಸದರಿ ಫಲಾನುಭವಿಗಳಿಗೆ ಒಂದು ಜೊತೆ ಉಳುಮೆ ಎತ್ತು/ಹಸುಗಳನ್ನು ಖರೀದಿಸಲು ಶೇ.75 ರಷ್ಟು ಸಹಾಯ ಧನವನ್ನು ನೀಡಲಾಗುವುದು. ಉಳಿದ್ದ ಶೇ..25ರಷ್ಟು ಸಾಲದ ಮೊತ್ತವನ್ನು ರಾಷ್ಟ್ರೀಕೃತ ಬ್ಯಾಂಕ್‌ಗಳಿಂದ ಪಡೆಯಲಾಗುವುದು.

ಘಟಕ ಉಳುಮೆ ಎತ್ತು/ಹಸು ಒಂದು ಜೊತೆ

ಘಟಕದ ವೆಚ್ಚ ರೂ.13,000

ಸಹಾಯಧನ ರೂ..9,750

ಸಾಲ ರೂ.3,250

| ನಿಗದಿಯಾದ ಅನುದಾನ | ಬಿಡುಗಡೆ | ವೆಚ್ಚ |
|---|---|---|
| ರೂ.5.00 ಲಕ್ಷ | ರೂ.3.86 ಲಕ್ಷ | ರೂ.2.63 ಲಕ್ಷ |